ಸೇಫ್ಟಿ ಟ್ರಾಫಿಕ್ ಇಂಜಿನಿಯರಿಂಗ್ ಹಾಗೂ ಟ್ರಾಫಿಕ್ ಸಿಗ್ನಲ್‌ಗಳು ಇವನ್ನೆಲ್ಲಾ ಹೆಚ್ಚು ಮಾಡುತ್ತೇವೆ. ಈ ಸಂಚಾರದ ಒಂದು ವ್ಯವಸ್ಥೆಯನ್ನು ಉತ್ತಮಗೊಳಿಸಬೇಕಾದರೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಈಗಾಗಲೇ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 'ಡಿಸ್ಟ್ರಿಕ್ಟ್ ರೋಡ್ ಸೇಫ್ಟಿ ಕಮಿಟಿ' ಎಂದು ಇದೆ. ರಾಜ್ಯ ಮಟ್ಟದಲ್ಲಿ ಸಾರಿಗೆ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇನ್ನೊಂದು ರೋಡ್ ಸೇಫ್ಟಿ ಕಮಿಟಿ ಎಂದು ಇದೆ. ಇವೆರಡೂ ಸಮಿತಿಗಳನ್ನೂ ಸಹಿತ ನಾವು ಪುನರ್-ರಚಿಸಿದ್ದೇವೆ. ಆದರೆ ಇದಕ್ಕೆ ಹಣವನ್ನು ಇದುವರೆಗೂ ಕೊಟ್ಟಿರಲಿಲ್ಲ, ಒಂದು ಜಿಲ್ಲೆಗೆ ಒಂದು ಲಕ್ಷ ರೂಪಾಯಿಗಳಂತೆ ಪ್ರತಿ ವರ್ಷ ಸಹಿತ ಕೊಡುತ್ತಿದ್ದರು. ಈ ವರ್ಷ ರಾಜ್ಯದಲ್ಲಿ ವಿಶೇಷವಾಗಿ ಈ ರೋಡ್ ಸೇಫ್ಟಿ ಕಮಿಟಿಗಳಿಗೆಂದು, ಬಿಜಾಪುರ ಜಿಲ್ಲೆಯನ್ನೂ ಸೇರಿಸಿ ಪ್ರತಿ ಜಿಲ್ಲೆಗೆ ಸಹಿತ ಸಿಗ್ನಲ್ ದೀಪಗಳನ್ನು ಹಾಕಲಿಕ್ಕೆ, ರೋಡ್ ಶೆಲ್ಟರ್‌ಗಳನ್ನು ಇಂಪ್ರೂವ್ ಮಾಡಲಿಕ್ಕೆ ಅವರ ಹೇಳತಕ್ಕಂಥ ಸಿಗ್ನಲ್ ದೀಪಗಳನ್ನು ಹಾಕಲಿಕ್ಕೆ ಪ್ರತಿ ಜಿಲ್ಲೆಗೆ ಕನಿಷ್ಟ ಪಕ್ಷ 5 ಲಕ್ಷ ರೂಪಾಯಿಗಳನ್ನು ಕೊಡಬೇಕು ಎನ್ನತಕ್ಕ ಪರಿಶೀಲನೆ ಇದೆ. ಬೆಂಗಳೂರು ನಗರ, ಹುಬ್ಬಳ್ಳಿ ಮಹಾನಗರ ಈ ರೀತಿ ಮಹಾನಗರದೊಳಗೆ, ಬಿಜಾಪುರ ನಗರವೂ ಸೇರಿದಂತೆ, ಎಲ್ಲಿ ವಾಹನಗಳ ಸಂಖ್ಯೆ ಜಾಸ್ತಿ ಇದೆ, ಅಲ್ಲಿ ರೋಡ್ ಟ್ರಾಫಿಕ್‌ನ್ನು ಸುಧಾರಣೆ ಮಾಡಲಿಕ್ಕೆ ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡತಕ್ಕ ಪರಿಶೀಲನೆಯನ್ನೂ ಸಹಿತ ನಾವು ಮಾಡುತ್ತಿದ್ದೇವೆ.

ಶ್ರೀ ಬಸನಗೌಡ ಪಾಟೀಲ್ : ಬಿಜಾಪುರ ನಗರದಲ್ಲಿ ಇರುವ ಸಂಚಾರಿ ಸಿಬ್ಬಂದಿ ಎಷ್ಟು ಎನ್ನುವ ಪ್ರಶ್ನೆಗೆ ಇಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಅಲ್ಲಿದ್ದಾರೆ ಎಂಬ ಉತ್ತರ ಕೊಟ್ಟಿದ್ದಾರೆ. ಆದರೆ ನನಗೆ ಬಂದ ಮಾಹಿತಿ ಪ್ರಕಾರ ಅಲ್ಲಿ ಒಬ್ಬರೇ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಅಲ್ಲಿಗೆ ಇನ್ನೊಬ್ಬ ಸಬ್ ಇನ್ಸ್‌ಪೆಕ್ಟರ್ ನೇಮಿಸಿ. ಅವರೇನು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಆಗುವುದಿಲ್ಲ, ರಾಜ್ಯದಲ್ಲಿ ಸದ್ಯಕ್ಕೆ ಸಬ್ ಇನ್ಸ್‌ಪೆಕ್ಟರ್‌ಗಳ ಕೊರತೆ ಇದೆ. ಈಗಾಗಲೇ ಅಲ್ಲಿ ಇಬ್ಬರು ಸಬ್ ಇನ್ಸ್‌ಪೆಕ್ಟರ್‌ಗಳು ಇದ್ದಾರೆ. ಪೊಲೀಸ್ ಸಿಬ್ಬಂದಿಯನ್ನು ಕೇವಲ ಹೆಚ್ಚು ಮಾಡುವುದರಿಂದಾಗಿ, ಟ್ರಾಫಿಕ್‌ನಲ್ಲಿ ಗಣನೀಯವಾಗಿ ಸುಧಾರಣೆಯಾಗುತ್ತದೆಂದು ನಾನಂತೂ ತಿಳಿದುಕೊಂಡಿಲ್ಲ.

ಕಬಿನಿ ಏತ ನೀರಾವರಿ ಯೋಜನೆ

2447 - ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಏತ ನೀರಾವರಿ ಯೋಜನೆ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ, ಈ ನೀರಾವರಿ ಯೋಜನೆಗೆ ಒಳಪಡುವ ತಾಲ್ಲೂಕುಗಳು ಯಾವುವು ಹಾಗೂ ಭೂಮಿಯ ವಿಸ್ತೀರ್ಣವೆಷ್ಟು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಮತ್ತು ಇ) ಯೋಜನೆಯು ಅನ್ವೇಷಣಾ ಹಂತದಲ್ಲಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಎರಡನೇ ಹಂತದ ಕಬಿನಿ ನೀರಾವರಿ ಯೋಜನೆ ಮಂಜೂರಾಗಿದೆಯೇ ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಇಲ್ಲ ಎಂದು ಉತ್ತರಿಸಿದ್ದಾರೆ. 1985ರಲ್ಲಿ ನಮ್ಮ ಸರ್ಕಾರ ಇದ್ದಾಗಲೇನೇ, ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಅಲ್ಲಿಗೆ ಬಂದು ಅಡಿಗಲ್ಲು ಹಾಕಿ, ಸಾವಿರಾರು ಜನರನ್ನು ಸೇರಿಸಿ ಅವರ ಸಮ್ಮುಖದಲ್ಲಿ, ಇದನ್ನು 4-5 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಆಶ್ವಾಸನೆ ಕೊಟ್ಟಿದ್ದರು. ಸುಮಾರು 10 ವರ್ಷಗಳಾದರೂ ಈ ಯೋಜನೆ ಇನ್ನೂ..... ಅನ್ವೇಷಣಾ ಹಂತದಲ್ಲಿದೆ ಎಂದು ಹೇಳಿದ್ದೀರಿ. ಈ ಉತ್ತರ ನನಗೆ ಅಷ್ಟೊಂದು ತೃಪ್ತಿಕರವಾಗಿಲ್ಲ. ,ಅಡಿಗಲ್ಲು ಹಾಕಿದ್ದುದು ಏನಾಯಿತು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ 1986ರಲ್ಲಿ 390ಕೋಟಿ ರೂಪಾಯಿಗಳಿಗೆ ಮಂಜೂರಾತಿಯಾದ ಸಮಗ್ರ ಕಬಿನಿ ಜಲಾಶಯ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಏತ ನೀರಾವರಿ ವ್ಯವಸ್ಥೆ ಸಲುವಾಗಿ 250 ಕೋಟಿ ರೂಪಾಯಿಗಳ ಅವಕಾಶ ಇವುತ್ತದೆ. ಮಂಜೂರಾದ ಅಂದಾಜಿನ ಪ್ರಸ್ತಾವನೆ ಪ್ರಕಾರ ಈಗಾಗಲೇ ಕಟ್ಟಲಾಗಿರುವ ಕಬಿನಿ ಜಲಾಶಯ ಯೋಜನೆಗೆ ಮಳೆಗಾಲದ ತಿಂಗಳನ್ನು ಹೊರತು ಪಡಿಸಿ, ಬರುವ ಹೆಚ್ಚುವರಿ ನೀರಿನ ಪೈಕಿ 28 ಟಿ.ಎಂ.ಸಿ. ನೀರನ್ನು ಜುಲೈ-ಅಕ್ಟೋಬರ್‌ರವರೆಗೆ ನಾಲ್ಕು ತಿಂಗಳಲ್ಲಿ ಸೂಕ್ತ ಯಂತ್ರಗಳ ಮೂಲಕ ಮೇಲಕ್ಕೆತ್ತಿ, ಈ ನೀರನ್ನು ಕಬಿನಿಗಿಂತ ಮೇಲಕ್ಕೆತ್ತಿದಲ್ಲಿರುವ ಸಾಗರ, ದೊಡ್ಡಕೆರೆ ಹಳ್ಳ ಮತ್ತು ನೊಗವನಹಳ್ಳಿಗೆ ಎರಡು ಅಣೆಕಟ್ಟುಗಳನ್ನು ನಿರ್ಮಿಸಿ ಅವುಗಳಲ್ಲಿ ಕಬಿನಿ ಜಲಾಶಯದಿಂದ ಮೇಲೆತ್ತಿರುವ ನೀರನ್ನು ಶೇಖರಿಸಿ ಈ ಉದ್ದೇಶಿತ ಜಲಾಶಯಗಳಿಂದ ಮೇಲ್ದಂಡೆ ಕಾಲುವೆಗಳನ್ನು ಹೊರತುಪಡಿಸಿ, ಅವುಗಳಿಂದ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ನಂಜನಗೂಡು, ಟಿ. ನರಸೀಪುರ, ಚಾಮರಾಜನಗರ, ಯಳಂದೂರು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳ ಒಟ್ಟು 42,170 ಹೆಕ್ಟೇರುಗಳಷ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗುತ್ತಿದೆ. ಆದರೆ ಪ್ರಸ್ತಾವನೆಯ ಬಗ್ಗೆ ವಿವರವಾದ ಸಮೀಕ್ಷೆ ಹಾಗೂ ತನಿಖಾ ಕಾರ್ಯಗಳನ್ನು ಪ್ರಾರಂಭಿಸಿದ ಹಾಗೆ ಸದರಿ ಉದ್ದೇಶಿತ ಜಲಾಶಯಗಳ ಜಲಾವೃತ ಪ್ರದೇಶಗಳು ರಾಷ್ಟ್ರೀಯ ಹುಲಿ ಸಂರಕ್ಷಣ ಯೋಜನೆ, ಅರಣ್ಯ ಪ್ರದೇಶದಲ್ಲಿದ್ದು ತನಿಖಾ ಕಾರ್ಯಕ್ರಮಗಳನ್ನು ಮಾಡಲು ಅರಣ್ಯ ಇಲಾಖೆಯಿಂದ ಅನುಮತಿ ದೊರೆತಿಲ್ಲ. ಇದೇ ಸದರಿ ಉದ್ದೇಶಿತ ಜಲಾಶಯಗಳ ಜಲಾವೃತ್ತ ಪ್ರದೇಶದಲ್ಲಿ ಬರುವ ನಿವಾಸಿಗಳಿಂದಲೂ ಸಹ ಈ ಜಲಾಶಯವನ್ನು ಕಟ್ಟುವ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿರುವುದರಿಂದ ಇದಕ್ಕೆ ಪೂರಕವಾಗಿ, ಇದೇ ನೀರನ್ನು ಉಪಯೋಗಿಸಿಕೊಂಡು ಬೇರೆ ವ್ಯವಸ್ಥೆಯನ್ನು ರೂಪಿಸುವ ಬಗ್ಗೆ ಸಮೀಕ್ಷಾ ಕಾರ್ಯವನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಲ್ಲಿ ಮೈಸೂರಿನಲ್ಲಿರುವ ತನಿಖಾ ವಲಯದ ಅಧಿಕೃತ ಇಂಜಿನಿಯರ್‌ರವರು ನಡೆಸುತ್ತಿದ್ದಾರೆ. ಈ ಹಂತದಲ್ಲಿ ಕೆಲಸ ಪ್ರಾರಂಭವಾಗುವ ಹಾಗೂ ಪೂರ್ಣಗೊಳಿಸುವ ದಿನಾಂಕವನ್ನು ಈಗಲೇ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಸಚಿವರು ಉತ್ತರ ಕೊಡುವಾಗ ಈಗಾಗಲೇ ಜಲಾಶಯಗಳಿಂದ 4-5 ತಾಲ್ಲೂಕುಗಳಿಗೆ ನೀರಾವರಿಯಾಗುತ್ತಿದೆ ಎಂದು ತಿಳಿಸಿದ್ದಾರೆ. ನನ್ನ ಕ್ಷೇತ್ರದ ಗುಂಡ್ಲುಪೇಟೆ ತಾಲ್ಲೂಕಿಗೆ ಈ ಒಂದು ಯೋಜನೆಯ ಪ್ರಕಾರ 5 ಸಾವಿರಗಳಷ್ಟು ಎಕರೆಗೆ ನೀರಾರಿಯಾಗಬೇಕಾಗಿತ್ತು. ಆದರೆ ಇದುವರೆವಿಗೂ ಒಂದು ಎಕರೆಗೂ ನೀರಾವರಿ ಆಗಿಲ್ಲ. ಕಾಲುವೆ ನಮ್ಮ ಕಡೆ ಬರದಿರುವುದರಿಂದ, ಮಾನ್ಯ... ಸಚಿವರು ಈಗಾಗಲೇ ಅಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳುವುದು ನನಗೆ ಅಷ್ಟೊಂದು ಸೂಕ್ತವಾಗಿ ಕಾಣುತ್ತಿಲ್ಲ. ಆದಷ್ಟು ಬೇಗನೆ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ ನಾವು ಕಾವೇರಿ ಜಲವಿವಾದದಲ್ಲಿ ಅನೇಕ ಹೊರರಾಜ್ಯಗಳ ಜೊತೆಗೆ

ತಕರಾರು ಇರುವುದರಿಂದ ನಮ್ಮ ನೀರನ್ನು ನಮ್ಮ ಜಿಲ್ಲೆಯಲ್ಲಿಯೇ ಹೆಚ್ಚಾಗಿ ಬಳಕೆಯಾಗುವ ರೀತಿಯಲ್ಲಿ ಆದಷ್ಟು ಬೇಗ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈ ಬಗ್ಗೆ ಸಂಪೂರ್ಣವಾದ ಹಾಗೂ ವಿವರವಾದ ಮಾಹಿತಿಯನ್ನು ತರಿಸಿಕೊಂಡು, ಆ ಬಗ್ಗೆ ಪರಿಶೀಲಿಸುತ್ತೇನೆ.

ಹರಪನಹಳ್ಳಿ ಏತ ನೀರಾವರಿ ಯೋಜನೆಗಳು

2535 - ಶ್ರೀ ಡಿ. ನಾರಾಯಣದಾಸ್ (ಹರಪ್ಪನಹಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನ ತುಂಗಾಭದ್ರಾ ನದಿ ದಂಡೆಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿವೆ; ಅವು ಯಾವುವು; (ಏತ ನೀರಾವರಿ ಯೋಜನೆಗಳ ಪೂರ್ಣ ಮಾಹಿತಿ ನೀಡುವುದು);

ಆ) ಈ ಏತ ನೀರಾವರಿ ಯೋಜನೆಗಳು ಅನೇಕ ವರ್ಷಗಳಿಂದ ದುರಸ್ತಿಯಾಗದೆ ಈ ಭಾಗದ ರೈತರು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಏಳು 7

ವಿವರಗಳನ್ನು ಲಗತ್ತಿಸಿದೆ.

ಆ) ಈ ಯೋಜನೆಗಳ ಪಂಪುಗಳ ಸಾಮರ್ಥ್ಯವು ಕಡಿಮೆ ಆಗಿರುವುದರಿಂದ ಇವುಗಳನ್ನು ಪದೇ ಪದೇ ದುರಸ್ತಿಗೊಳಿಸಬೇಕಾಗಿರುತ್ತದೆ.

ಇ) ಈ ಏತ ನೀರಾವರಿ ಯೋಜನೆಗಳನ್ನು ಯೋಜನೇತರ ಅನುದಾನದಲ್ಲಿ ಹಾಗೂ ಏತ ನೀರಾವರಿ ರಿಹ್ಯಾಬಿಲಿಟೇಷನಲ್ಲಿ (ಯೋಜನೆಯಲ್ಲಿ) ಹಂತ ಹಂತವಾಗಿ ಸುಸ್ಥಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಡಿ. ನಾರಾಯಣದಾಸ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2535ರ ಅನುಬಂಧ

ಅನುಬಂಧ

ಹರಪನಹಳ್ಳಿ ತಾಲ್ಲೂಕಿನ ತುಂಗಾಭದ್ರಾ ನದಿ ದಂಡೆಯಲ್ಲಿರುವ ಏತ ನೀರಾವರಿ ಯೋಜನೆಗಳ ವಿವರಗಳು

ಕ್ರ ಸಂ.	ಏತ ನೀರಾವರಿ ಯೋಜನೆಯ ಹೆಸರು		ಅಂದಾಜುಪೂರ್ಣ ವೆಚ್ಚ	ಗೊಂಡ ವರ್ಷ	ಉದ್ದೇಶಿತ ಆಚ್ಚುಕಟ್ಟು (ಹೆಕ್ಟೇರು)	ನೀರಾವರಿ ಯಾಗುತ್ತಿರುವ ಕ್ಷೇತ್ರ (ಹೆ.)	ರೇಚಕ ಯಂತ್ರಗಳ ಸಂಖ್ಯೆ ಮತ್ತು ಅಶ್ವಶಕ್ತಿ
(1)	ಗರ್ಭಗುಡಿ-I	ಹರಪನಹಳ್ಳಿ	8.00	1976	243.00	162.00	2 ಸಂಖ್ಯೆ 75 ಹೆಚ್‌ಪಿ
(2)	ಗರ್ಭಗುಡಿ-II	-"-	3.21	1976	186.00	94.00	2 ಸಂಖ್ಯೆ 70 ಹೆಚ್‌ಪಿ